# ರಕ್ಷಾಬಂಧನ

- ब्रह्माकुमारीज् वार्ता फिचर्स



ಹಬ್ಬಗಳ ತವರೂರಾದ ಭಾರತ ದೇಶದಲ್ಲಿ ಹಬ್ಬ ಹರಿದಿನಗಳಿಂದ ಕೂಡಿದ ಶ್ರಾವಣ ಮಾಸಕ್ಕೆ ವಿಶೇಷ ಮಹತ್ವ ಇದೆ. ವ್ರತ, ಪೂಜಾ–ಪಾಠಗಳು, ಧ್ಯಾನ–ಧಾರಣೆಗಳು, ಚಿಂತನೆಗಳ ಮಾಸವೇ ಶ್ರಾವಣ. ನಾಗಚವತಿ, ನಾಗಪಂಚಮಿ, ಶ್ರಾವಣಸೋಮವಾರ, ಶ್ರಾವಣಶುಕ್ರವಾರ, ಗೋಕುಲಾಷ್ಟಮಿ, ನೂಲಹುಣ್ಣಿಮೆ, ಹೀಗೆ ಪ್ರತಿದಿನವು ಹಬ್ಬ. ಈ ಎಲ್ಲ ಹಬ್ಬಗಳಲ್ಲಿ "ನೂಲಹುಣ್ಣಿಮೆ" ಅಥವಾ '**ರಕ್ಷಾಬಂಧನ** ಒಂದು ಪ್ರಮುಖ ಹಬ್ಬ.

ಭಾರತಿಯರು ನಾವು ವಿದೇಶಿಯರ ಅನುಕರಣೆಯಿಂದ ನಮ್ಮ ನಿಜವಾದ ಸಂಸ್ಕೃತಿಯನ್ನು ಮರೆತು ಸ್ನೇಹ ಆತ್ಮಿಯತೆಯಿಂದ ದೂರ ಹೊಗುತ್ತಿದ್ದೆವೆ. ಇಂದಿನ ಯುವ ಪಿಳಿಗೆ 'ವೆಲೆಂಟೈಯಿನ ಡೆ' ಗೆ ಮಹತ್ವವನ್ನು ನಿಡುತ್ತಿದೆ ಹೊರತು, ಸಹೊದರತ್ವದ ಭಾವನೆಯನ್ನು ಬೆಳೆಸುವ ಸ್ನೇಹದ ಸೂಚಕನಾದ ರಾಖಿಗೆ ಬೆಲೆ ಇಲ್ಲದಂತಾಗಿದೆ. ಮೊಬೈಲ ಮೂಲಕ ಅಶ್ಲಿಲ ಚಿತ್ರ ಹಾಗೂ ಸಂದೇಶ ಗಳನ್ನು ಕಳಿಸುವ ಪ್ರವೃತ್ತಿ ಮಹಾನಗರಗಳಲ್ಲಿ ಬೆಳೆಯುತ್ತಿದೆ. ಇಂತಹ ಸಮಯದಲ್ಲಿ ರಾಖಿಯ ಮಹತ್ವವನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಮಾನವರೆಲ್ಲರೂ ನಾನಾ ಪ್ರಕಾರದ ರಕ್ಷಣೆಯನ್ನು ಬಯಸುತ್ತಾರೆ. 1)ತನುವಿನ ರಕ್ಷಣೆ, 2)ಮನಸ್ಸಿನ ರಕ್ಷಣೆ, 3)ಧನದ ರಕ್ಷಣೆ, 4)ಧರ್ಮ ಪವಿತ್ರತೆಯ ಅಥವಾ ಸತೀತ್ವದ ರಕ್ಷಣೆ, 5) ಅಪತ್ತುಗಳು ಹಾಗೂ ಸಂಕಟಗಳಿಂದ ರಕ್ಷಣೆ, 6)ಕಾಲ ಅಥವಾ ಮೃತ್ಯುವಿನ ಪಾಶದಿಂದ ರಕ್ಷಣೆ– ಇವು ಮುಖ್ಯವಾದವು. ಇದರಲ್ಲಿ ತನುವಿನ ರಕ್ಷಣೆಯನ್ನು ಮೃತ್ಯುವು ಸನ್ನಿಹಿತವಾದಾಗ ನಿಗದಿಯಾಗಿರುವ ಮೃತ್ಯುವಿನಿಂದ ರಕ್ಷಿಸಲು ಯಾರಿಂದಲೂ ಸಾಧ್ಯವಾಗುವುದಿಲ್ಲ. ಮನಸ್ಸಿನ ರಕ್ಷಣೆಯನ್ನು ಮಾಯೆಯ ಬಂಧನಗಳಿಂದ ಅಥವಾ ತಾಮಸಿಕ ವಿಕಾರಗಳಿಂದ ಮುಕ್ತನಾಗಲು ಭಗವಂತನಿಗೆ ಶರಣ ಹೋಗಬೇಕಾಗುತ್ತದೆ. ಆದ್ದರಿಂದಲೇ ವಿಷಯ ವಿಕಾರಗಳನ್ನು ನಾಶಮಾಡು, ಪಾಪವನ್ನು ಹರಿಸು ಎಂದು ಪತಿತಪಾವನ, ಪಾಪಕಟೇಶ್ವರನಾದ ಪರಮಾತ್ಮನಿಗೆ ಪ್ರಾರ್ಥನೆ ಮಾಡುತ್ತಾರೆ. ಧರ್ಮದ, ಪವಿತ್ರತೆಯ ಹಾಗು ಸತೀತ್ವದ ರಕ್ಷಣೆಯನ್ನು ಸರ್ವಸಮರ್ಥನಾದ ಭಗವಂತ ಒಬ್ಬನೆ ಮಾಡಲು ಸಾಧ್ಯವಿದೆ. ಇದಕ್ಕೆ ದ್ರೌಪದಿಯ ದೃಷ್ಟಾಂತವಿದೆ. ಕಾಲ ಅಥವಾ ಯಮನ ಪಾಶದಿಂದ ಪಾರು ಮಾಡುವವನೂ ಸಹ ಕಾಲರಕಾಲ ಮಹಾಕಾಲ ಮಹಾಕಾಳೇಶ್ವರನೇ ಆಗಿದ್ದಾನೆ. ಯಾರನ್ನು ಈಶ್ವರನು ರಕ್ಷಣೆ ಮಾಡುತ್ತಾನೋ ಅವರಿಗೆ ಇಡೀ ಪ್ರಪಂಚವೇ ವೈರಿಯಾದರೂ ಅವರ ಕೂದಲನ್ನೂ ಕೊಂಕಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಭಕ್ತ ಮಾರ್ಕಂಡೇಯನ ದೃಷ್ಟಾಂತವಿದೆ. ಸಾಂಸಾರಿಕ ಆಪತ್ತುಗಳು ಅಥವಾ ಲೌಕಿಕ ಸಂಕಟಗಳಿಂದಲೂ ರಕ್ಷಣೆಯನ್ನು ಈಶ್ವರನ್ನು ಹೊರತು ಅನ್ಯಯಾರಿಂದಲೂ ಸಾಧ್ಯವಿಲ್ಲ. ಅದ್ದರಿಂದಲೇ ಅವನಿಗೆ ದುಃಖಹರ್ತಾ, ಸುಖಕರ್ತಾ, ವಿಘ್ನವಿನಾಶಕ ಎಂದು ಕರೆಯುತ್ತಾರೆ.

ಸಕಲಜೀವರಾಶಿಗಳಿಗೆ ಲೇಸನ್ನು ಬಯಸುವ, ಸಬಕಾ ಮಾಲಿಕ ಎಕ್ ನಾಗಿರುವ, ಸರ್ವರ ರಕ್ಷಕ ಭಗವಂತನ ಜೊತೆಗೆ ಸಂಬಂಧದ ಬಂಧನವೇ **ರಕ್ಷಾಬಂಧನ** . ಅವನನ್ನು ತಿಳಿದು, ಅವನನ್ನೆ ನೆನೆಯುತ್ತಾ, ನಾವೆಲ್ಲರೂ ಅವನ ಮಕ್ಕಳು ಎಂದು ನಡೆದಾಗ 'ವಸುಧೈವ ಕುಟುಂಬಕಂ' ಆಗುವುದು. ನಾವು ಎಲ್ಲರು ಭಗವಂತನ ಮಕ್ಕಳು ಸಹೋದರ ಸಹೋದರಿಯರು, ನಮ್ಮ ಪವಿತ್ರ ಸ್ನೇಹದ ಸೂಚಕವೇ **ರಾಖಿ.** ಈ ಹಬ್ಬದಲ್ಲಿ ಸಹೋದರಿ ಸಹೋದರನಿಗೆ ರಾಖಿ ಕಟ್ಟಿ ಮಸ್ತಕದಲ್ಲಿ ತಿಲಕವನ್ನಿಟ್ಟು ಬಾಯಿಯನ್ನು ಸಿಹಿ ಮಾಡುತ್ತಾಳೆ. ಇದರ ಪ್ರತಿಯಾಗಿ ಸಹೋದರನು ಕಾಣಿಕೆಯನ್ನು ಕೊಡುತ್ತಾನೆ. ಮಸ್ತಕದಲ್ಲಿ ಇಡುವ ತಿಲಕ ಆತ್ಮಜ್ಯೋತಿಯ ಪ್ರತೀಕ, ಬಾಯಿ ಸಿಹಿ ಮಾಡುವುದೆಂದರೆ ಮಧುರವಾದ ನುಡಿಗಳನ್ನು ನುಡಿಯುವುದು, ರಾಖಿಯಲ್ಲಿ ಇರುವ ದಾರವು ನಿಯಮ ಹಾಗು ಸಂಯಮದ ಸೂಚಕ, ದುರ್ಗುಣ, ದುಶ್ಚಟಗಳನ್ನು

ಬಿಡುವುದು ಕಾಣಿಕೆಯ ಅರ್ಥವಾಗಿದೆ. ಹಾಗಾದರೆ ಬನ್ನಿ ನಾವೆಲ್ಲರೂ ತ್ರಿರಕ್ಷೆಯಲ್ಲಿ ಬಂಧಿತರಾಗಿ ಇತರ ಅನೇಕ ಬಂಧನಗಳನ್ನು ಸ್ನೇಹದ ಸಂಬಂಧದಲ್ಲಿ ಪರಿವರ್ತಿತಿಸಿ, ಜಾತಿ, ಮತ, ಭಾಷಾ. ಭೇದಗಳನ್ನು ಮರೆತು, ಸಹೋದರತ್ವದ ಭಾವನೆಯಿಂದ ಜೀವನದಲ್ಲಿ ಸುಖ–ಶಾಂತಿಯನ್ನು ಪಡೆಯೋಣ.

*---ವಿಶ್ವಾಸ ಸೋಹೋನಿ. ಧಾರವಾಡ*

**- ब्रह्माकुमारीज् वार्ता फिचर्स**
www.bkvarta.com